

ಡಾ.ವಿನೋದ ಛೆಬ್ಬಿ

**ಇಳಿವಯಸ್ಸಿನಲ್ಲಿ ಪ್ರೇಮಕ್ಕೂ ಸ್ನೇಹಕ್ಕೂ ಒಬ್ಬರೇ ಸಂಗಾತಿ ಇದ್ದರೆ ಅಂತ್ಯಕಾಲ ಹೇಗಿರುತ್ತದೆ?**

# 342: ಹೊಸ ದಾರಿ - 82

ಮರುಸಂಬಂಧವನ್ನು ಬಯಸಿ ಬಂದ ಒಂಟಿ ಹಿರಿಯರಲ್ಲಿ ಎಲ್ಲರೂ ಗಂಡಸರಾಗಿದ್ದು ಹೆಂಗಸರು ಯಾರೂ ಇಲ್ಲವೆಂದು ಹೇಳಿದ್ದೆನಷ್ಟೆ? ಇದರ ಹಿನ್ನೆಲೆಯಲ್ಲಿ ಸ್ವಾರಸ್ಯಕರ ಸಂಗತಿಯೊಂದನ್ನು ನಿಮ್ಮೊಡನೆ ಹಂಚಿಕೊಳ್ಳುತ್ತಿದ್ದೇನೆ.

ಅರವತ್ತು ದಾಟಿದ ಗಂಡಸೊಬ್ಬರು ಹೋದವಾರವಷ್ಟೆ ನನ್ನೊಡನೆ ಮಾತಾಡಿದರು. ಮಕ್ಕಳು ಬೆಳೆದು ದೂರವಾಗಿದ್ದರಿಂದ ಒಂಟಿಯಾಗಿದ್ದಾರೆ. ನಾನು ಪ್ರಸ್ತಾಪಿಸುತ್ತಿರುವ ಮರುಸಾಂಗತ್ಯದಲ್ಲಿ ಆಸಕ್ತರಾಗಿದ್ದು, ಪಟ್ಟಿಗೆ ತನ್ನನ್ನೂ ಸೇರಿಸಿಕೊಳ್ಳಲು ಕೇಳಿಕೊಂಡರು. ಹಾಗೆಯೇ, ತನಗೆ ಮಧುಮೇಹ, ರಕ್ತದ ಏರೊತ್ತಡವಿದ್ದು, ಮಿತಿಯಲ್ಲಿದೆ ಎಂದರು. ಅದರ ಬೆನ್ನಹಿಂದೆ ಇನ್ನೊಂದು ಸಂಗತಿಯನ್ನೂ ಹೇಳಿಕೊಂಡರು: 'ಇತ್ತೀಚೆಗೆ ಅಷ್ಟೊಂದು ಶಿಶ್ನದ ಉದ್ರೇಕವಾಗುತ್ತಿಲ್ಲ; ಔಷಧಿ ಸೂಚಿಸುತ್ತೀರಾ?' ಅವರ ಅನಿರೀಕ್ಷಿತ ಪ್ರಶ್ನೆಯನ್ನು ಬದಿಗಿಟ್ಟು, ಹೆಂಡತಿಗೆ ಏನಾಗಿತ್ತು ಎಂದೆ. ಆಕೆಗೇನು, ಚೆನ್ನಾಗಿಯೇ ಇದ್ದಾಳೆ. ಆದರೆ ಒಟ್ಟಿಗೆ ಮಲಗಿ ಹಲವು ವರ್ಷಗಳಾದುವು ಎಂದರು. ಕಾರಣ? ಮನಸ್ತಾಪವೇನೂ ಇಲ್ಲ; ಆಕೆಗೆ ಕೂಟದಲ್ಲಿ ಆಸಕ್ತಿಯಿಲ್ಲ, ಅಷ್ಟೆ. ನನಗೆ ಗೊಂದಲವಾಯಿತು. ನಾನು ಕರೆಗೊಡುತ್ತಿರುವುದು ಒಂಟಿ ಹಿರಿಯರಿಗೆ; ಇವರಿಗೆ ಪೂರ್ವಾರ್ಹತೆಯಿಲ್ಲ! ಸಂಗಾತಿ ಇರುವಾಗ ಇನ್ನೊಬ್ಬಳನ್ನು ಬಯಸುವ ಔಚಿತ್ಯದ ಬಗೆಗೆ ಪ್ರಶ್ನಿಸಿ ಕಾನೂನು ವಿವರಿಸಿದಾಗ ಬಂದ ಉತ್ತರವೇನು? 'ಸರಿ, ಆಕೆಯ ಒಪ್ಪಿಗೆ ಪಡೆದು, ಇಲ್ಲ ಡೈವೋರ್ಸ್ ಪಡೆದು ನಿಮ್ಮನ್ನು ಸಂಪರ್ಕಿಸುವೆ'.

ಇದು ನನ್ನನ್ನು ಯೋಚಿಸಲು ಹಚ್ಚಿತು. ಇವರು ಹೆಂಡತಿಯೊಡನೆ ಮಲಗುವುದನ್ನು ಬಿಟ್ಟ ಕಾರಣ ಸ್ಪಷ್ಟವಾಗಿದೆ: ಇವರ ಕಾಮಸುಖದ ಬೇಡಿಕೆಗೆ ಮೈ ಒಪ್ಪಿಸಿಕೊಳ್ಳುವುದನ್ನು ನಿರಾಕರಿಸುತ್ತಿದ್ದಾಳೆ. ಇವರು ಕಾಮವಾಂಛಲ್ಯ ಬಿಡದಿದ್ದುದರಿಂದ ಹೆಂಡತಿಯೇ ಇವರನ್ನು ಬಿಟ್ಟಿದ್ದಾಳೆ. ಗಂಡನಿಗಾಗಿ, ಕುಟುಂಬಕ್ಕಾಗಿ ಎಲ್ಲವನ್ನೂ ಬಿಟ್ಟುಕೊಟ್ಟ ಪ್ರತಿ ಸಂಪ್ರದಾಯಸ್ಥ ಹೆಣ್ಣಿಗೆ ತನ್ನದೆನ್ನುವಂಥ ಏನಾದರೊಂದನ್ನು ಹಂಚದೆ ತನಗಾಗಿಯೇ ಇಟ್ಟುಕೊಳ್ಳಬೇಕು ಎನ್ನುವ ಅಲ್ಪಸ್ವಾಯತ್ತತೆಯ ಅಪೇಕ್ಷೆ ಇರಲೇಬೇಕು. ಅದಕ್ಕಾಗಿಯೇ ಇಳಿವಯಸ್ಸಿನಲ್ಲಿ ಕಾಮಾಸಕ್ತಿ ಇದ್ದರೂ ಅನೇಕರು ವ್ಯಾವಹಾರಿಕ ಕಾರಣ ಮುಂದೆಮಾಡಿ ಗಂಡನಿಂದ ಬೇರೆ ಮಲಗುತ್ತಾರೆ. ಇದನ್ನು ಅರ್ಥಮಾಡಿಕೊಳ್ಳದ ಗಂಡಸು ಕಾಮಸುಖ ಸಿಗದ ಹೆಣ್ಣಿನಿಂದ ಪ್ರಯೋಜನವೇನು ಎಂದು ತಾನೂ ದೂರ ಉಳಿಯುತ್ತಾನೆ. ನನ್ನ ಪ್ರಶ್ನೆ ಏನೆಂದರೆ, ನಲವತ್ತು ವರ್ಷ ಸಂಸಾರ ಮಾಡಿದ ಹೆಣ್ಣಿನೊಂದಿಗೆ ಕಾಮವನ್ನು ಬದಿಗಿಟ್ಟು ಅನ್ಯೋನತೆ ಸಾಧಿಸದಿದ್ದರೆ ಹೊಸ ಹೆಣ್ಣಿನೊಂದಿಗೆ ಏನು ಸಾಧಿಸಬಲ್ಲರು? ಇಂಥ ಗಂಡಸರ ಸಂಖ್ಯೆ ನಮ್ಮಲ್ಲಿ ಸಾಕಷ್ಟಿದೆ ಎನ್ನಿಸಿತು.

ಹಾಗೆಂದು ನಾನು ಹಸಿ ಕಾಮುಕತೆಗೆ (libido) ವಿರುದ್ಧವಾಗಿಲ್ಲ. ಅದು ಗಂಡು–ಹೆಣ್ಣುಗಳ ಸಂಬಂಧಕ್ಕೆ ಬಾಗಿಲಿದ್ದಂತೆ. ಅದರ ಮೂಲಕ ಒಳಹೊಕ್ಕ ಮೇಲೆ ಬಾಗಿಲು ಮುಗಿದು ವಿಶಾಲ ಬಯಲೊಂದು ತೆರೆದುಕೊಳ್ಳುತ್ತದೆ. ಕಾಮದಾಟದಲ್ಲಿ ಅಲ್ಪಪರಿಚಿತರು ಖಾಸಗಿಯಾಗಿ ತನ್ನದೆನ್ನುವ ಎಲ್ಲವನ್ನೂ ತೆರೆದುಕೊಳ್ಳುವಾಗ ತಾನು ಬೆರೆಯುತ್ತಿರುವ ವ್ಯಕ್ತಿಯನ್ನು ಗೌರವಿಸುತ್ತಾರೆ. ನಿನ್ನಿಂದಲೇ ನನಗಿದೆಲ್ಲ ಸಿಕ್ಕಿತು ಎನ್ನುವಾಗ ಪರಸ್ಪರ ಕೃತಜ್ಞತೆಯ ಆತ್ಮೀಯತೆ ಬೆಳೆಯುತ್ತದೆ. ಹೀಗೆ ಸಂಗಾತಿಯ ಬಗೆಗೆ ಸದ್ಭಾವನೆಗಳನ್ನು ಬೆಳೆಸಿಕೊಳ್ಳುವಾಗ ಅದಕ್ಕೆ ಸಮಾನವಾದ ಭಾವನೆಗಳು ನಮ್ಮಲ್ಲಿ ಜಾಗೃತವಾಗುತ್ತ, ಸಂಗಾತಿಗೆ ಆಪ್ತರಾಗುವಂತೆ ನಮಗೆ ನಾವೇ ಆಪ್ತರಾಗುತ್ತೇವೆ. ಮೊದಮೊದಲು ನಿನ್ನ ಶರೀರ ಬೇಕು ಎನ್ನುತ್ತಿದ್ದವರು ಬರಬರುತ್ತ ನೀನೇ ಬೇಕೆಂದು ಬಯಸುತ್ತೇವೆ; ನಂತರ ನೀನೊಬ್ಬ/ಳು ಸಾಕೆಂದು ಹೇಳುತ್ತೇವೆ. ಇಲ್ಲಿ ಸಂಗಾತಿಯ ಕಾರಣದಿಂದ 'ನಾನು ಪ್ರೀತಿಸಲ್ಪಡಲು, ಗೌರವಿಸಲ್ಪಡಲು ಅರ್ಹನಾ/ಳಾದ ವ್ಯಕ್ತಿ' ಎಂದು ಆತ್ಮಗೌರವಕ್ಕೆ ದಾರಿಯಾಗುತ್ತದೆ. ವಯಸ್ಸಾದಂತೆ ಕಾಮುಕತೆ ನಶಿಸುತ್ತ ಅನ್ಯೋನ್ಯತೆ ಹಾಗೂ ಆತ್ಮಗೌರವ ಮಾತ್ರವುಳಿದು, ದೇಹಸುಖ ಸಿಗದಿದ್ದರೂ ಸಖ್ಯಸುಖಕ್ಕಾಗಿ ಸಂಗಾತಿಯೊಡನೆ ಮಲಗಲು ಬಯಸುತ್ತೇವೆ. ಹೀಗೆ ಒಂದೇ ವ್ಯಕ್ತಿಯೊಡನೆ ನಿರಂತರ ಪ್ರತಿಕ್ರಿಯಿಸುತ್ತಿರುವಾಗ ಬದುಕಲು ಬೇಕಾದ ಸದ್ಗುಣಗಳನ್ನು ಬೆಳೆಸಿಕೊಳ್ಳುತ್ತ ದಿವ್ಯ ವ್ಯಕ್ತಿಗಳಾಗಿ ಬೆಳೆಯುತ್ತೇವೆ. ಅದಕ್ಕೇ ಏಕಸಂಗಾತಿಯೊಡನೆ ನಿಷ್ಠೆಯಿಂದ ಇರುವವರಲ್ಲಿ ಹಪಹಪಿ, ಚಂಚಲತೆ ಕಾಣದೆ ಆತ್ಮಜಾಗೃತಿ ಕಾಣುತ್ತದೆ. ಇಂಥ ದಾಂಪತ್ಯಗಳಲ್ಲಿ ಕಾಮದಿಂದ ಹೊರತಾದ ಅನ್ಯೋನ್ಯತೆಯ ಇತರರಿಗೂ ಎದ್ದುಕಾಣುವಂತೆ ಇರುತ್ತದೆ. ಅದಕ್ಕೊಂದು ಪ್ರಸಂಗ: ಅರವತ್ತೈದು ದಾಟಿದ ಈ ದಂಪತಿಯಲ್ಲಿ ಕಾಮಕೂಟ ಎಂದೋ ನಿಂತುಹೋಗಿದೆ. ಗಂಡನ ತಮ್ಮ ಪತ್ನೀಸಮೇತ ಮನೆಗೆ ಬಂದಿದ್ದಾನೆ. ಗಂಡ ಮುಖಕ್ಷೌರ ಮಾಡಿಕೊಳ್ಳಲು ಹೊರಡುವಾಗ ಹೆಂಡತಿ ಹೇಳುತ್ತಾಳೆ: 'ರೀ, ಎದೆಯ ಮೇಲಿನ ಕೂದಲನ್ನೂ ತೆಗೆದುಹಾಕಿ. ಬಾಯಿಯಲ್ಲಿ ಕೂದಲು ಬಂದುಬಿಡುತ್ತವೆ'. ಗಂಡ ನಗುತ್ತ ಕೇಳುತ್ತಾನೆ: 'ಯಾರ ಬಾಯಿಯಲ್ಲಿ?' ವಿಷಯ ಅರ್ಥವಾಗಿ ನಾಲ್ವರೂ ಬಿದ್ದುಬಿದ್ದು ನಗುತ್ತಾರೆ.

ವಿಪರ್ಯಾಸವೆಂದರೆ, ಹೆಚ್ಚಿನ ಸಾಂಪ್ರದಾಯಿಕ ದಾಂಪತ್ಯಗಳಲ್ಲಿ ಇಷ್ಟೊಂದು ಬಿಚ್ಚುಮನಸ್ಸು ಹುಟ್ಟಲಾರದು. ಯಾಕೆಂದರೆ, ಯಾಜಮಾನ್ಯ ವ್ಯವಸ್ಥೆಯ ದಾಂಪತ್ಯದಲ್ಲಿ 'ಕೇಳಿದಾಗ ಕಾಮ' ಎನ್ನುವುದು ಗಂಡಿಗೆ ಬಳುವಳಿಯಾಗಿ ಬಂದಿರುತ್ತದೆ. ಹಾಗಾಗಿ ಇಲ್ಲಿ ಹೆಣ್ಣು ಗಂಡಿನೊಂದಿಗೆ ಗುರುತಿಸಿಕೊಳ್ಳುವುದು ಪರಂಪರೆಯಿಂದಲೇ ಹೊರತು ಅನ್ಯೋನ್ಯತೆಯಿಂದಲ್ಲ — ಅದಕ್ಕೇ ಗಂಡನಿಗೆ ಬಹುವಚನ, ಶ್ರೀಮತಿ ಇಂಥವರು ಎನ್ನುವ ನಾಮಾಂಕಿತ. ಹಾಗಾಗಿ ಗಂಡಂದಿರು ಇಳಿವಯಸ್ಸಾದರೂ ಕಾಮದ ಬಾಗಿಲು ದಾಟದೆ ಅಲ್ಲೇ ನಿಂತುಬಿಡುತ್ತಾರೆ — ಮೇಲಿನ ಹಿರಿಯರು ಇದಕ್ಕೆ ಸಾರ್ವತ್ರಿಕ ದೃಷ್ಟಾಂತ. ಇಂಥವರಿಗೆ ಕೊನೆಗಾಲದಲ್ಲಿ ಹಪಹಪಿಯ ಹೊರತು ಏನೂ ಉಳಿಯಲಾರದು. ವ್ಯತಿರಿಕ್ತವಾಗಿ, ಸಂಗಾತಿಯ ಜೊತೆಗೂಡಿ ಹುಟ್ಟಿಸಿಕೊಂಡ ಅನ್ಯೋನ್ಯತೆಯು ಕೊನೆಗಾಲಕ್ಕೆ ತಂಪೆರೆಯುತ್ತದೆ.

ಹೆಂಡತಿಯಿದ್ದರೂ ಪ್ರೇಮಕ್ಕಾಗಿ ಹೊಸ ಸಂಗಾತಿಯನ್ನು ಬಯಸುವ ಗಂಡಸರು ನೀವಾಗಿದ್ದರೆ ನಿಮಗೊಂದು ಕಿವಿಮಾತು: ಗಂಡುಹೆಣ್ಣುಗಳು ಹತ್ತಿರವಾಗುವುದಕ್ಕೆ ಏನು ಬೇಕು ಗೊತ್ತೆ? ಪ್ರೇಮವಲ್ಲದೇ ಸ್ನೇಹ ಬೇಕು. ಸ್ನೇಹ ಗಾಢವಾದಷ್ಟೂ ಸಂಬಂಧ ಬಲವಾಗುತ್ತದೆ — ಅದಕ್ಕೇ ಸಂಗಾತಿಯೊಡನೆ ಜಗಳ ಆಡುವವರೂ ಸ್ನೇಹಿತರೊಡನೆ ಮನಸ್ಸು ಬಿಚ್ಚುತ್ತಾರೆ. ಇಳಿವಯಸ್ಸಿನಲ್ಲಿ ಹೊಸ ಸಂಗಾತಿಯನ್ನು ಪ್ರೇಮಕ್ಕಾಗಿ ಬಯಸುವಿರಾದರೆ ಅದನ್ನೇ ನಿಮ್ಮ ಹೆಂಡತಿಯೊಡನೆಯ ಸಂಬಂಧದಲ್ಲಿ ಸ್ನೇಹದೊಡನೆ ಯಾಕೆ ತರಬಾರದು? ಪ್ರೇಮಕ್ಕೂ ಸ್ನೇಹಕ್ಕೂ ಒಬ್ಬರೇ ಆದರೆ ಎಷ್ಟೊಂದು ಅದ್ಭುತವಾಗಿರುತ್ತದೆ!

ದಾಂಪತ್ಯದಲ್ಲಿ ಸ್ನೇಹವನ್ನು ಬರಮಾಡಿಕೊಳ್ಳಲು ಸಾಕಷ್ಟು ದಾರಿಗಳಿವೆ. ಇಬ್ಬರೂ ಒಟ್ಟಿಗಿರುವ ಸಣ್ಣಪುಟ್ಟ ಕ್ಷಣಗಳನ್ನು ನೆನಪಿಟ್ಟುಕೊಳ್ಳುವ ಅನುಭವಗಳನ್ನಾಗಿ ಪರಿವರ್ತಿಸುವುದು (ಉದಾ. ಎಲ್ಲದಕ್ಕೂ ಫೋಟೊ ತೆಗೆಯುವುದು); ಸಂಗಾತಿಯಲ್ಲಿ ನಿಜವಾದ ಆಸಕ್ತಿಯನ್ನು ತೋರಿಸುವುದು (ಉದಾ. ಅವರ ಬಟ್ಟೆಬರೆಗಳನ್ನು ನೀವೇ ಓರಣದಿಂದ ಮಡಿಸಿಡುವುದು); ಸಕಾರಾತ್ಮಕ ಪ್ರತಿಕ್ರಿಯೆ ತೋರಿಸುವುದು (ಸಂಗಾತಿಯ ವೈಫಲ್ಯವನ್ನು ಸಕಾರಣದಿಂದ ಬೆಂಬಲಿಸುವುದು); ಭೇದಭಾವಗಳನ್ನು ಒಪ್ಪಿಕೊಳ್ಳುವುದು (ನಾವಿಬ್ಬರೂ ಅವಳಿಗಳಲ್ಲವಲ್ಲ?) ಇತ್ಯಾದಿ. ಅಷ್ಟಲ್ಲದೆ ಕೆಲಸಕಾರ್ಯಗಳಲ್ಲಿ ಸಂಗಾತಿಯ ಬಲಗೈಯಾಗಿ.

ಯಾಜಮಾನ್ಯ ಅಭ್ಯಾಸವಾದ ಇಳಿವಯಸ್ಸಿನ ಗಂಡಸರಿಗೆ ನಾನು ಹೇಳುವುದಿಷ್ಟೆ: ಅಂತ್ಯಕಾಲದಲ್ಲಿ ನೀವು ಪಟ್ಟ ಕಾಮಸುಖ ನಿಮ್ಮೊಂದಿಗೆ ಬರುವುದಿಲ್ಲ. ಆದರೆ ನಿಮ್ಮ ಸಂಗಾತಿ ಆತ್ಮೀಯತೆಯಿಂದ ನಿಮ್ಮ ಕೈಹಿಡಿದುಕೊಂಡು ಕಣ್ಣಲ್ಲಿ ಕಣ್ಣಿಟ್ಟು ದುಃಖಾರ್ತಳಾಗಿ ನೋಡುತ್ತಿದ್ದರೆ ನಿಮಗೆ ನೆಮ್ಮದಿ ಎರೆಯುತ್ತದೆ. ಸಾವಿನ ಬಗೆಗೆ ಬರೆಯಲು ಶುರುಮಾಡಿದಾಗ ಒಬ್ಬರು ಹಿರಿಯ ಗಂಡಸರು ಕರೆಮಾಡಿದ್ದರು. ಹೆಂಡತಿಯನ್ನು ಕಳೆದುಕೊಂಡು ಹಲವು ವರ್ಷಗಳಾದರೂ ಮರೆಯಲಾಗುತ್ತಿಲ್ಲವೆಂದು ಜೋರಾಗಿ ಅತ್ತುಬಿಟ್ಟರು. ಇದಕ್ಕೆ ವ್ಯತಿರಿಕ್ತವಾಗಿ ನನ್ನ ಸ್ನೇಹಿತನ ತಂದೆ ತೀರಿಕೊಂಡಾಗ ತಾಯಿ ಶವದ ಬಳಿ ಹೋಗಲೂ ಭಯಪಟ್ಟು, ಯಾವಾಗ ಸಾಗಿಸುತ್ತಾರೋ ಎಂದು ಕಾಯುತ್ತಿದ್ದುದು ನೆನಪಿನಲ್ಲಿದೆ. ನಿಮಗಾವುದು ಬೇಕು? ಅದಕ್ಕೆ ಈಗಿನಿಂದಲೇ ತಯಾರಾಗಿ.

**ಸಂಪರ್ಕಕ್ಕೆ: 8494933888; Email: vinod.chebbi@gmail.com**